ವ್ಯಾಜ್ಯಗಳಿಗೂ ಕಾರಣವಾಗುತ್ತಿರುವುದರಿಂದ ಸರ್ಕಾರ ಈ ಕಡೆ ವಿಶೇಷ ಗಮನ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಬಿ. ಸೋಮಶೇಖರ್ : ಆಗಬಹುದು.

ಆಶ್ರಯ ಮನೆಗಳು

405 -ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಆಶ್ರಯ ಮನೆಗಳ ರಚನೆಗೆ ಈಗ ಒದಗಿಸಿರುವ ರೂ.20,000.00 ಸಾಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಇದನ್ನು ಹೆಚ್ಚಿಸುವ ಉದ್ದೇಶ ಸರ್ಕಾರಕ್ಕಿದೆಯೇ ?

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು) :

ಅ) ಬಂದಿರುವುದಿಲ್ಲ.

ಆ) ಆಶ್ರಯ ಮನೆಗಳ ವೆಚ್ಚವನ್ನು ಹೆಚ್ಚಿಸುವ ಉದ್ದೇಶ ಸದ್ಯಕ್ಕೆ ಇರುವುದಿಲ್ಲ. ಆದರೆ ಫಲಾನುಭವಿಗಳೇ ಮನೆಗಳನ್ನು ಕಟ್ಟುವುದರಿಂದ ಅವರುಗಳಿಗೆ ಅನುಕೂಲತೆಗಳು ಹೆಚ್ಚಾಗಿ ಬೇಕಾದರೆ ಸರ್ಕಾರ ನೀಡುವ ಹಣದ ಜೊತೆಗೆ ಸ್ವಂತ ವಂತಿಕೆಯಿಂದ ಕಟ್ಟಿಕೊಳ್ಳಲು ಅವಕಾಶವಿರುತ್ತದೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಮಾನ್ಯ ಅಧ್ಯಕ್ಷರೆ, ಆಶ್ರಯ ಮನೆಗಳ ರಚನೆಗೆ ಒದಗಿಸುತ್ತಿರುವ 20,000.00 ರೂಪಾಯಿಗಳು ಸಾಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನಿಸಿರುವುದಕ್ಕೆ ಉತ್ತರವಾಗಿ ಅವರು ಬಂದಿರುವುದಿಲ್ಲವೆಂದಿದ್ದಾರೆ. ಇವೊತ್ತಿನ ಪರಿಸ್ಥಿತಿಯಲ್ಲಿ ಒಂದು ಪಕ್ಕಾ ಮನೆ ಕಟ್ಟಬೇಕಾದರೆ ನನ್ನ ಲೆಕ್ಕದ ಪ್ರಕಾರ ಸುಮಾರು 40,000 ದಿಂದ 50,000 ರೂಪಾಯಿಗಳು ಬೇಕಾಗುತ್ತದೆ. ವಾಸಕ್ಕೆ ಯೋಗ್ಯವಿರುವಂಥ ಮನೆ ಕಟ್ಟಬೇಕಾದರೆ ಇಷ್ಟು ಹಣ ಬೇಕಾಗುತ್ತದೆ. ಇದರಲ್ಲಿ ಶೌಚಾಲಯವೂ ಒಳಗೊಂಡಿರುತ್ತದೆ. ಆದರೆ, ಕಡಿಮೆ ಹಣದಲ್ಲಿ ಮನೆ ಕಟ್ಟುವ ಸಂದರ್ಭದಲ್ಲಿ ಬೇಕಾಗುವ ಮರಮುಟ್ಟುಗಳೇನಿರುತ್ತವೆ, ಕಡಿಮೆ ಕ್ರಯದ್ದು ಉಪಯೋಗಿಸಬೇಕಾಗುತ್ತದೆ. ಕಡಿಮೆ ಕ್ರಯದ ಸಾಮಗ್ರಿಗಳನ್ನು ಉಪಯೋಗಿಸಿದರೆ ಎರಡು ವರ್ಷಗಳಾಗುವಷ್ಟರಲ್ಲಿ ಪುನಃ ದುರಸ್ತಿಗೆ ಬರುತ್ತದೆ. ಇದರಿಂದಾಗಿ ಮನೆ ಕಟ್ಟಿರುವವರಿಗೆ ದೊಡ್ಡ ಹೊರೆಯಾಗುತ್ತದೆ. ಫಲಾನುಭವಿಗಳು ಒಂದು ಮನೆ ಕಟ್ಟಿಕೊಳ್ಳಬೇಕಾದರೆ 45,000 ರೂಪಾಯಿಗಳು ಬೇಕಾಗಿರುವುದರಿಂದ, ಸರ್ಕಾರ ಕೊಡುವ 20,000 ರೂಪಾಯಿಗಳು ಸಾಕಾಗುವುದಿಲ್ಲ. ಇಷ್ಟು ಹಣ ಬಳಸಿಕೊಂಡ ನಂತರವೂ ಬಡವರಿಗೆ ಇನ್ನು 20,000 ರಿಂದ 25,000 ರೂಪಾಯಿಗಳು ಖರ್ಚಾಗುತ್ತದೆ. ಅದಕ್ಕೋಸ್ಕರ, ಫಲಾನುಭವಿಗಳಿಗೆ ಆಶ್ರಯ ಮನೆಗಳನ್ನು ಕಟ್ಟಿಕೊಳ್ಳಲು 30,000 ದಿಂದ 35,000 ರೂಪಾಯಿಗಳಷ್ಟು ಹಣ ನಿಗದಿ

ಪಡಿಸಿದರೆ ಅವರಿಗೆ ಅನುಕೂಲ ಆಗುತ್ತದೆ ಮತ್ತು ಉಳಿದ ಹಣವನ್ನು ಫಲಾನುಭವಿಗಳೇ ಭರಿಸುವುದಕ್ಕೆ ಸಾಧ್ಯವಾಗುತ್ತದಾದ್ದರಿಂದ ಇದರ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ಆಶ್ರಯ ಮನೆಗಳನ್ನು ಕಟ್ಟಿಕೊಳ್ಳುವುದಕ್ಕಾಗಿ ಫಲಾನುಭವಿಗಳಿಗೆ 20,000 ರೂಪಾಯಿಗಳನ್ನು ನಾವು ಕೊಡುತ್ತಿದ್ದು, ಅದರಲ್ಲಿ 10,000 ರೂಪಾಯಿಗಳು ಸಬ್ಸಿಡಿ, ಉಳಿದ 10,000 ರೂಪಾಯಿಗಳು ಲೋನ್ ಕಾಂಪೊನೆಂಟ್ ಎಂದು ಕೊಡುತ್ತಿದ್ದೇವೆ. ಇದು ವಾಪಸ್ಸು ಕೊಡುವುದಾಗಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳಿಗೆ ಶೇಕಡಾ 33ರಷ್ಟು ಕೊಡುವುದೇನಿದೆ, ಅಂದರೆ, 20,000 ರೂಪಾಯಿಗಳು ಸಂಪೂರ್ಣ ಸಬ್ಸಿಡಿಯಾಗಿದ್ದು, ಉಳಿದ ಶೇಕಡಾ 67ರಷ್ಟು ಏನಿದೆ, ಅದನ್ನು ಬೇರೆ ಬೇರೆ ವರ್ಗಗಳವರು ಸರ್ಕಾರಕ್ಕೆ 10,000 ರೂಪಾಯಿಗಳನ್ನು ವಾಪಸ್ಸು ಕೊಡಬೇಕು. ಅವರು ಹಣವನ್ನು ವಾಪಸ್ಸು ಕೊಡುತ್ತಿಲ್ಲವಾದ್ದರಿಂದ ಸರ್ಕಾರವೇ ಆ ಹಣವನ್ನು ಸಂಪೂರ್ಣ ತುಂಬುತ್ತಿದೆ. ಇದರಿಂದಾಗಿ ಇವೊತ್ತು ಸರ್ಕಾರದ ಮೇಲೆ ಆರ್ಥಿಕ ಹೊರೆ ಜಾಸ್ತಿ ಬೀಳುತ್ತಿದೆ. ಲೋನ್ ಕಾಂಪೊನೆಂಟನ್ನು ಫಲಾನುಭವಿಗಳಾದ ಯಾರೂ ಕೂಡ ವಾಪಸ್ಸು ಕೊಡುತ್ತಿಲ್ಲವಾದ್ದರಿಂದ ಹುಡ್ಕೋಗೆ ರಿ-ಪೇಮೆಂಟ್ ಅನ್ನು ನಾವೇ ಕೊಡುತ್ತಿದ್ದೇವೆ. ಮನೆಗಳ ಸಂಖ್ಯೆಯನ್ನೂ ಜಾಸ್ತಿ ಮಾಡಿದ್ದೇವೆ. 1998-99ನೇ ಸಾಲಿನಲ್ಲಿ ಒಂದು ಲಕ್ಷ ಮನೆಗಳನ್ನು ಅಧಿಕವಾಗಿ ಮಂಜೂರು ಮಾಡುವುದರ ಜೊತೆಗೆ, ತಮ್ಮ ಕ್ಷೇತ್ರಗಳಲ್ಲಿ ಆಶ್ರಯ ಮನೆಗಳನ್ನು ಮಂಜೂರು ಮಾಡುವದರ ಜೊತೆಗೆ, ತಮ್ಮ ಕ್ಷೇತ್ರಗಳಲ್ಲಿ ಆಶ್ರಯ ಮನೆಗಳನ್ನು ಮಂಜೂರು ಮಾಡಿಲ್ಲವೆಂದು ಕೆಲವು ಮಾನ್ಯ ಸದಸ್ಯರು ಹೇಳಿದ ಬಳಿಕ 30 ಸಾವಿರ ಮನೆಗಳ ಜೊತೆಗೆ ಬ್ಯಾಕ್ ಲಾಗ್ ಇದ್ದ 60 ಸಾವಿರ ಮನೆಗಳು, ಒಟ್ಟು ಎರಡು ಲಕ್ಷ ಆಶ್ರಯ ಮನೆಗಳನ್ನು ಮಂಜೂರು ಮಾಡಿದ್ದು ವಿವಿಧ ಹಂತಗಳಲ್ಲಿ ಅವುಗಳ ನಿರ್ಮಾಣ ಕಾರ್ಯ ಸಾಗುತ್ತಿದೆ. ಮೊದಲು 15,000 ರೂಪಾಯಿಗಳು ಯುನಿಟ್ ಕಾಸ್ಟ್ ಇದುದ್ದನ್ನು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ 18.8.95 ರಿಂದೇಚೆಗೆ ಅದನ್ನು 20,000 ರೂಪಾಯಿಗಳಷ್ಟು ಹೆಚ್ಚು ಮಾಡಿದ್ದೇವೆ. ಐದು ಸಾವಿರ ರೂಪಾಯಿಗಳು ಜಾಸ್ತಿ ಕೊಡುವುದಾಯಿತು. ಆಶ್ರಯ ಮನೆ ಯೋಜನೆಯಡಿ ಮಾನ್ಯ ಸದಸ್ಯರು ತಿಳಿಸಿದಂತೆ ಪಕ್ಕಾಮನೆಗಳನ್ನು ನಿರ್ಮಿಸುವುದಕ್ಕೆ ಕನಿಷ್ಠ 30,000 ರೂಪಾಯಿಗಳು ಬೇಕಾಗುತ್ತದೆ. 10-20 ಮನೆಗಳನ್ನು ಕಟ್ಟುವುದಕ್ಕೆ 200 ಫೀಟ್ ಆಗುತ್ತದೆ. ಫಲಾನುಭವಿಯಾದವರೂ ಕೂಡ ಇದಕ್ಕಾಗಿ ಸ್ವಲ್ಪ ಹಣ ಹಾಕಿಕೊಳ್ಳಬೇಕು. ನಮ್ಮ ಕ್ಷೇತ್ರದಲ್ಲಿ ಫಲಾನುಭವಿಗಳು ತಮ್ಮ ಕೈಯಿಂದ ಹಣ ಹಾಕಿಕೊಂಡಿದ್ದಾರೆ, ಅನುಕೂಲವಿರುವವರು ಹಣ ಹಾಕಿಕೊಳ್ಳುತ್ತಾರೆ. ಮನೆ ನಿರ್ಮಿಸಿಕೊಳ್ಳುವಾಗ ಲೇಬರ್ ಪೋರ್ಷನ್ ಅನ್ನು ಫಲಾನುಭವಿಯ ಮನೆಯವರೇ ಮಾಡಿಕೊಳ್ಳಬೇಕಾಗುತ್ತದೆ. ಈ ದೃಷ್ಟಿಯಿಂದ ಆಶ್ರಯ ಯೋಜನೆಯಡಿ ಕೊಡುತ್ತಿರುವ 20,000 ರೂಪಾಯಿಗಳು ಹೆಚ್ಚಿರುವುದರಿಂದ ಯುನಿಟ್ ಕಾಸ್ಟ್ ಅನ್ನು ಇದಕ್ಕಿಂತ ಹೆಚ್ಚು ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಮಾನ್ಯ ಅಧ್ಯಕ್ಷರೆ, 1998-99ನೇ ಸಾಲಿನಲ್ಲಿ ಒಂದು ಲಕ್ಷ ಆಶ್ರಯ ಮನೆಗಳ ಜೊತೆಗೆ 30 ಸಾವಿರ ಮನೆಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದು, ಆ ಹಣ ಕೂಡ ಪೂರ್ತಿಯಾಗಿ

ಪಾವತಿಯಾಗಿಲ್ಲ. ಈಗ ನಮ್ಮ ಕ್ಷೇತ್ರಕ್ಕೆ ಹೊಸದಾಗಿ 250 ಆಶ್ರಯ ಮನೆಗಳನ್ನು ಮಂಜೂರು ಮಾಡಿದ್ದು ಅದಕ್ಕೂ ಹಣ ಬಂದಿಲ್ಲ ಈ ಹಿಂದೆ ಒದಗಿಸಲಾಗಿದ್ದ 200 ಮನೆಗಳಿಗೆ ಸಂಬಂಧಿಸಿದಂತೆಯೂ ಹಣ ಬಂದಿರುವುದಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ಹಣವನ್ನು ಈಗ ಬಿಡುಗಡೆ ಮಾಡುತ್ತಿದ್ದೇವೆ, ಅಂತಹ ಸಮಸ್ಯೆ ಈಗ ಯಾವುದೂ ಇಲ್ಲ. 1999-2000ನೇ ಸಾಲಿಗೆ ಅಂದರೆ ಪ್ರಸಕ್ತ ವರ್ಷದಲ್ಲಿ ಹೊಸದಾಗಿ ನಾವು ಯಾವುದನ್ನೂ ತೆಗೆದುಕೊಳ್ಳುವುದಿಲ್ಲ. ಬ್ಯಾಕ್‌ಲಾಗ್ ಇರುವ ಒಂದು ಲಕ್ಷ 30 ಸಾವಿರ ಮನೆಗಳೇನಿವೆ, ಅದಕ್ಕೆ ಹಣ ಪಡೆದು ಕೊಡುವ ಕೆಲಸ ಮಾಡುತ್ತಿದ್ದೇವೆ.

ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ : ಅದು ಆಶ್ರಯ ಮನೆಯಲ್ಲ, ಅದು ಸಾವಿನ ಮನೆ! ಮನೆಯನ್ನು ಕಳಪೆ ದರ್ಜೆಯಲ್ಲಿ ಕಟ್ಟುವುದಕ್ಕಿಂಥ ಸರ್ಕಾರ ಮೌನವಾಗಿದ್ದು ಅವರಿಗೆ ಖಾಲಿ ನಿವೇಶನ ಕೊಟ್ಟಿದ್ದರೆ ಚೆನ್ನಾಗಿತ್ತೆಂದು ನನ್ನ ಭಾವನೆ.

ಶ್ರೀ ಬಿ.ಎನ್. ಬಚ್ಚೇಗೌಡ : ಈ ತರಹ ಮಾತನಾಡಿದರೆ ಹೇಗೆ? ನಿಜವಾಗಿಯೂ ಈ ರೀತಿ ಸಾವಿನ ಮನೆ ಎಂದು ಅಟ್ರಿಬ್ಯೂಟ್ ಮಾಡಿದರೆ ಹೇಗೆ? ಅವರು ಬಹಳ ಇರೆಸ್ಪಾನ್ಸಿಬಲ್ ಆಗಿ ಮಾತನಾಡುತ್ತಿದ್ದಾರೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಯಾರು ಇರೆಸ್ಪಾನ್ಸಿಬಲ್ ಆಗಿ ಮಾತನಾಡುತ್ತಿರುವುದು? ನಾನು ಜವಾಬ್ದಾರಿಯುತ ಸ್ಥಾನದಲ್ಲಿ ನಿಂತು ಮಾತನಾಡುತ್ತಿದ್ದೇನೆ. ನನ್ನನ್ನು ಇರೆಸ್ಪಾನ್ಸಿಬಲ್ ಎಂದು ಹೇಗೆ ಹೇಳುತ್ತೀರಿ? ಕಟ್ಟಿರುವ ಕಳಪೆ ದರ್ಜೆಯ ಮನೆಗಳನ್ನು ನೀವು ನೋಡಿದ್ದೀರಾ? ನಾನು ಇರೆಸ್ಪಾನ್ಸಿಬಲ್ ಎಂದು ಹೇಳಿರುವ ಅವರ ಮಾತನ್ನು ವಾಪಸ್ಸು ತೆಗೆದುಕೊಳ್ಳಿ.

ಶ್ರೀ ಬಿ.ಎನ್. ಬಚ್ಚೇಗೌಡ : ಮನೆ ಕಟ್ಟಿಕೊಳ್ಳಲು 30,000 ರೂಪಾಯಿಗಳು ಬೇಕಾಗುತ್ತದೆ, 50,000 ರೂಪಾಯಿಗಳೂ ಬೇಕಾಗುತ್ತದೆ. ಎಷ್ಟು ಹಣದಲ್ಲಿ ಬೇಕಾದರೂ ಮನೆ ಕಟ್ಟಿಕೊಳ್ಳಬಹುದು. ಅದು ಆತನ ಆರ್ಥಿಕ ಶಕ್ತಿಯ ಮೇಲೆ ಅವಲಂಬಿಸಿರುತ್ತದೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : 'ಇರೆಸ್ಪಾನ್ಸಿಬಲ್' ಎಂಬ ಪದವನ್ನು ತೆಗೆದುಹಾಕಬೇಕು. ನಾನು ವಿದ್ಯಾವಂತ ಮತದಾರರಿಂದ ಇಲ್ಲಿಗೆ ಆರಿಸಿ ಬಂದವನಾಗಿದ್ದೇನೆ. 'ಇರೆಸ್ಪಾನ್ಸಿಬಲ್' ಎಂದು ಹೇಳಿರುವುದನ್ನು ವಾಪಸ್ಸು ತೆಗೆದುಕೊಳ್ಳಿ. ನಮಗೆ ನಿಮ್ಮ ಬಗ್ಗೆ ಗೌರವವಿದೆ.

ಅಧ್ಯಕ್ಷರು : ಅವರ ಬಗ್ಗೆ ನಿಮಗೆ ಗೌರವವಿದೆ, ನಿಮ್ಮ ಬಗ್ಗೆ ನಮಗೆ ಗೌರವವಿದೆ. ಮಾನ್ಯ ಶಂಕರಲಿಂಗೇಗೌಡರೆ, ಆಶ್ರಯ ಮನೆಯನ್ನು ಮೂರನೆಯವರು ಕಂಟ್ರಾಕ್ಟ್ ತೆಗೆದುಕೊಂಡು ಕಟ್ಟುವುದಿಲ್ಲ. ಫಲಾನುಭವಿಯೇ ಸ್ವತಃ ಕಟ್ಟಿಕೊಳ್ಳುವುದಾಗಿದೆ. ಆದುದರಿಂದ ಆತ ವಾಸದ ಮನೆಯನ್ನಾದರೂ ಕಟ್ಟಿಕೊಳ್ಳಬಹುದು, ಸಾವಿನ ಮನೆಯನ್ನಾದರೂ ಕಟ್ಟಿಕೊಳ್ಳಬಹುದು! ಅದು ಫಲಾನುಭವಿಗೆ ಬಿಟ್ಟಿರುವ ವಿಷಯ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದಲ್ಲಿ ಆಶ್ರಯ ಮನೆಗಳನ್ನು ಕಟ್ಟಿದ್ದಾರೆ. ಮುಂದಿನ ವಾರ 380 ಆಶ್ರಯ ಮನೆಗಳನ್ನು ಹಂಚುವುದಕ್ಕೆ ಹೋಗುತ್ತಿದ್ದೇನೆ. ನಾನು ಕಟ್ಟಿರುವ ಆಶ್ರಯ ಮನೆಗಳನ್ನು ನೋಡಿದ್ದು ಅದನ್ನು ಕಾರ್ಪೊರೇಷನ್ ವತಿಯಿಂದ ಕಟ್ಟಲಾಗಿದೆ.

ಶ್ರೀ ಬಿ.ಎನ್. ಬಚ್ಚೇಗೌಡ : ಆಶ್ರಯ ಮನೆಯನ್ನು ಸ್ವತಃ ಫಲಾನುಭವಿಗಳೇ ಕಟ್ಟಿಕೊಳ್ಳಬೇಕು.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ರುಕ್ಮಯ್ಯ ಪೂಜಾರಿಯವರು ತಮ್ಮ ಮೊದಲ ಪ್ರಶ್ನೆಯಲ್ಲಿ ಆಶ್ರಯ ಮನೆಗಳ ರಚನೆಗೆ ಈಗ ಒದಗಿಸಿರುವ ರೂ. 20,000.00 ಸಾಲವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿರುವುದಕ್ಕೆ ಉತ್ತರವಾಗಿ 'ಬಂದಿರುವುದಿಲ್ಲ' ಎಂದಿದ್ದಾರೆ.

ಅಧ್ಯಕ್ಷರು : ಎಲ್ಲಿಯವರೆಗೆ ನಾವು ಆಶ್ರಯ ಮನೆಗಳನ್ನು ಕೊಡುವುದನ್ನು ರಾಜಕೀಯ ಅಸ್ತ್ರವಾಗಿ ಉಪಯೋಗಿಸಿಕೊಳ್ಳುತ್ತೇವೆಯೋ, ಒಂದು ಕ್ಷೇತ್ರದಲ್ಲಿ 10 ಸಾವಿರ, 8 ಸಾವಿರ ಮನೆಗಳು ಬೇಕಾಗಿದ್ದರೆ ಬರುವುದು 600 ಮನೆಗಳು ಮಾತ್ರ. ಆಗ ಕೇಳುವವರೂ ಹೆಚ್ಚಾಗುತ್ತಾರೆ. ನೀವು ನಿಮ್ಮ ಇಚ್ಛೆಗನುಗುಣವಾಗಿ ಕೊಡುತ್ತೀರಿ, ನಿಮ್ಮ ಸುತ್ತಮುತ್ತ ಅಲ್ಲಲ್ಲಿ ಇರುವವರಿಗೆ ಕೊಡುತ್ತೀರಿ. ಅವರ ಬಡತನ ನೀಗುವುದಿಲ್ಲ, ಅವರು ಕೊಡಬೇಕಾಗಿರುವ ಹಣವನ್ನೂ ಸಹ ವಾಪಸ್ಸು ಕೊಡುವುದಿಲ್ಲ. ಸಬ್ಸಿಡಿ ಮುಖಾಂತರ ಕೊಡುವುದು ವ್ಯರ್ಥವಾಗುತ್ತದೆ. ಅದಕ್ಕೋಸ್ಕರ ನಾವು ಪ್ರಾಯೋಗಿಕವಾಗಿ ಏನು ಪ್ರಾರಂಭಿಸಿದ್ದೇವೆಂದರೆ, ಪೂರ್ತಿ ಹಣ ಲೋನ್ ಕಾಂಪೊನೆಂಟ್ ಆಗಬೇಕು, ಅದನ್ನು ಪ್ರತಿ ದಿವಸ ಫಲಾನುಭವಿಗಳಿಂದ ವಸೂಲು ಮಾಡಬೇಕು. ಪ್ರತಿ ದಿವಸ ಆರೇಳು ರೂಪಾಯಿಗಳಷ್ಟು ಕಂತಿನ ಹಣ ಕಟ್ಟುವುದಕ್ಕೆ ಆಗದೇ ಹೋದರೆ ಆತನಿಗೆ ಮನೆಯಾದರೂ ಏಕೆ ಬೇಕು? ಬೀಡಿ, ಬೆಂಕಿ ಪೊಟ್ಟಣ ತೆಗೆದುಕೊಂಡರೆ ಅದಕ್ಕೆ ಆರೇಳು ರೂಪಾಯಿಗಳಾಗುತ್ತದೆ. ಅವರಲ್ಲಿ ಆ ಸ್ವಾಭಿಮಾನದ ಪ್ರಜ್ಞೆ ಮೂಡಿಸಬೇಕು. ಕೇರಳದಲ್ಲಿ ಇದು ಯಶಸ್ವಿಯಾಗುವುದಾದರೆ ನಮ್ಮಲ್ಲಿ ಏತಕ್ಕೆ ಫೇಲ್ಯೂರ್ ಆಗುತ್ತದೆ ಅದು ಆಗಬಾರದು. ಹುಡ್ಕೊದಿಂದ ನಾವು ಹೆಚ್ಚು ಹಣ ತೆಗೆದುಕೊಂಡು ಇಡೀ ವಸತಿಹೀನರು ಯಾರಿದ್ದಾರೆ, ಅವರಿಗೆಲ್ಲರಿಗೂ ವಸತಿಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಆದರೆ, ನಾವು ಇದನ್ನೊಂದು ರಾಜಕೀಯ ಅಸ್ತ್ರವಾಗಿ ಎಲ್ಲಿಯವರೆಗೆ ಉಪಯೋಗಿಸಲು ಅಪೇಕ್ಷಿಸುತ್ತೇವೆಯೋ ಅಲ್ಲಿಯವರೆಗೆ ಈ ಕಾರ್ಯಕ್ರಮ ನಿಷ್ಠೆಯಿಂದ ಅನುಷ್ಠಾನವಾಗುವುದಿಲ್ಲ. ಇದರಲ್ಲಿ ಸಾಕಷ್ಟು ಲೂಪ್‌ಹೋಲ್ಸ್ ಇದ್ದು, ಫಲಾನುಭವಿಗಳು ಆಶ್ರಯ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಸರ್ಕಾರ 20,000 ರೂಪಾಯಿಗಳನ್ನು ಏನು ಕೊಡುತ್ತಿದೆ, ಇದರ ಪೂರ್ತಿ ಹಣ ಫಲಾನುಭವಿಗಳ ಕೈಗೆ ತಲುಪುವುದರ ಹೊತ್ತಿಗೆ 16,000 ರೂಪಾಯಿಗಳಾಗಿರುತ್ತದೆ. ಇಷ್ಟು ಹಣದಲ್ಲಿ ಈ ಕಾಲದಲ್ಲಿ ಮನೆ ಕಟ್ಟಲು ಸಾಧ್ಯವಿಲ್ಲ. ಮನೆ ಕಟ್ಟಬೇಕೆನ್ನುವ ಗಂಭೀರತೆ ಆತನಿಗೆ ಇಲ್ಲ, ಮನೆ ಕಟ್ಟಿಸಬೇಕೆನ್ನುವ ಗಂಭೀರತೆ ನಮಗೂ ಇಲ್ಲ. ನಮ್ಮ ಸುತ್ತ ಸುತ್ತುವ ಯಾರೋ ನಾಲ್ಕು ಜನರಿಗೆ ಕೊಡುವುದೆಂದು ಹೇಳುವುದು that should not be the case.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಆ ರೀತಿ ಆಗುತ್ತಿಲ್ಲ. ಜನರು ಈಗ ಚೆನ್ನಾಗಿ ಕಟ್ಟುತ್ತಿದ್ದಾರೆ. ಅದು ತಮಗೂ ಗೊತ್ತಿದೆ, ನಮಗೂ ಗೊತ್ತಿದೆ. ಅಲ್ಲಲ್ಲಿ ಎಲ್ಲಿಯೋ ಅಂತಹ

ಪ್ರಕರಣಗಳಾಗಿರಬಹುದೇ ವಿನಾ ಫಲಾನುಭವಿಗಳಾದವರು ಈಗ ಕಟ್ಟಿಕೊಳ್ಳುತ್ತಾರೆ, ಅದರಲ್ಲಿ ಅವರ ಇನ್‌ವಾಲ್ವ್‌ಮೆಂಟ್ ಇರುವುದನ್ನು ನೋಡಿದ್ದೇವೆ.

ಅಧ್ಯಕ್ಷರು : ಮನೆ ಕೊಡುವುದಕ್ಕಿಂತಲೂ ಹೆಚ್ಚಾಗಿ ಅವರಲ್ಲಿ ಸ್ವಾಭಿಮಾನದ ಪ್ರಜ್ಞೆ ಮೂಡಿಸಬೇಕು. ಅದು ಅವರಿಗಾಗಿ ಕಟ್ಟುತ್ತಿರತಕ್ಕಂಥ ಮನೆ ಎಂಬುದು ಮುಖ್ಯ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಮಾನ್ಯ ಅಧ್ಯಕ್ಷರೆ, ತಾವು ವ್ಯಕ್ತಪಡಿಸಿರುವಂಥ ಭಾವನೆಗಳ ಬಗ್ಗೆ ನಮ್ಮ ಭಿನ್ನಾಭಿಪ್ರಾಯವೇನೂ ಇಲ್ಲ. ಆದರೆ, ಆಶ್ರಯ ಯೋಜನೆಯಡಿ ಮನೆ ಕಟ್ಟಿಕೊಳ್ಳಲು ಸರ್ಕಾರ ಕೊಡುವ 20,000 ರೂಪಾಯಿಗಳಿಂದ ವಸತಿ ಕಟ್ಟುವುದಕ್ಕಾಗವುದಿಲ್ಲ. ಆ ಹಣದಿಂದ ರಸ್ತೆ ಬದಿ ಒಂದು ಬಸ್ ಶೆಲ್ಟರ್ ಸಹ ಕಟ್ಟುವುದಕ್ಕಾಗುವುದಿಲ್ಲ. ಆದುದರಿಂದ, ಈ ಹಿನ್ನೆಲೆಯಲ್ಲಿ ಫಲಾನುಭವಿಗಳಿಗೆ ಮನೆ ಕಟ್ಟಿಕೊಳ್ಳಲು ಸರ್ಕಾರ ಕೊಡುತ್ತಿರುವ ಇಪ್ಪತ್ತು ಸಾವಿರ ರೂಪಾಯಿಗಳು ಸಾಲುವುದಿಲ್ಲವೆಂದೂ, ಅಲ್ಲದೆ, ಇದಕ್ಕಿಂತ ಆರ್ಥಿಕ ಸಹಾಯ ಹೆಚ್ಚು ಮಾಡುವುದಕ್ಕಾಗುವುದಿಲ್ಲವೆಂಬುದನ್ನು ಸರ್ಕಾರ ಕೊನೇ ಪಕ್ಷ ಒಪ್ಪಿಕೊಳ್ಳಬೇಕು.

ಅಧ್ಯಕ್ಷರು : ಮಾನ್ಯ ಸಚಿವರು ಅದನ್ನೇ ಹೇಳಿದ್ದು. ಸರ್ಕಾರ ಕೊಡುತ್ತಿರುವ ಇಪ್ಪತ್ತು ಸಾವಿರ ರೂಪಾಯಿಗಳಲ್ಲಿ ಸುಸಜ್ಜಿತವಾದ ಮನೆ ಕಟ್ಟುವುದಕ್ಕಾಗುತ್ತದೆಂದು ಹೇಳಲಿಲ್ಲ. ಇವೊತ್ತಿನ ಸ್ಥಿತಿ-ಗತಿಯಲ್ಲಿ ಸರ್ಕಾರ ಇದಕ್ಕಿಂತ ಹೆಚ್ಚು ಹಣ ನಿಗದಿಪಡಿಸುವುದಕ್ಕೆ ಸಾಧ್ಯವಿಲ್ಲವೆಂಬ ಮಾತನ್ನು ಹೇಳಿದರು.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಇನ್ನೊಂದು ವಿಷಯವೇನೆಂದರೆ, ಸರ್ಕಾರ ಆಶ್ರಯ ಯೋಜನೆಯಡಿ ಮನೆ ಕಟ್ಟುವುದಕ್ಕೆ ಫಲಾನುಭವಿಗಳಿಗೆ ಇಪ್ಪತ್ತು ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದು, ಅದು ಅವರ ಕೈಗೆ ತಲುಪುವಷ್ಟರಲ್ಲಿ 16,000, 18,000 ರೂಪಾಯಿಗಳಾಗುತ್ತದೆಂದು ನೀವು ಹೇಳಿದಿರಿ. ನಮ್ಮ ಮಲೆನಾಡಿನಂಥ ಪ್ರದೇಶದಲ್ಲಿ ಮನೆ ಕಟ್ಟಲು ಫೌಂಡೇಷನ್ ಹಾಕಿದರೆ ಕುಸಿದು ಹೋಗುತ್ತದೆ. ಸರಿಯಾದ ಸಮಯದಲ್ಲಿ ಹಣ ಕೊಡುವುದಿಲ್ಲ. ಇದರಲ್ಲಿ ಅನೇಕ ರೀತಿಯ ಲೂಪ್‌ಹೋಲ್ಸ್ ಇದೆ. ಬಡವರಿಗೆ ನಾವು ಆಶ್ರಯ ಮನೆಗಳನ್ನು ಕೊಡುತ್ತಿದ್ದೇವೆ. ಇದನ್ನು ರಾಜಕೀಯ ಅಸ್ತ್ರವಾಗಿ ಯಾರು ಬಳಸಿಕೊಳ್ಳುತ್ತಾರೋ ಗೊತ್ತಿಲ್ಲ, ನಮ್ಮ ಕ್ಷೇತ್ರದಲ್ಲಂತೂ ವಾಸ್ತವಿಕವಾಗಿ ನಾವು ಕಷ್ಟ ಅನುಭವಿಸುತ್ತಿದ್ದೇವೆ.

ಅಧ್ಯಕ್ಷರು : ದಯಮಾಡಿ ತಪ್ಪು ತಿಳಿದುಕೊಳ್ಳುಬಾರದು. ಅನೇಕ ಕಡೆಗಳಲ್ಲಿ ಈ ರೀತಿಯಾಗಿದೆ. ಬೇಕಾದರೆ ಮಧ್ಯಾಹ್ನದ ಹೊತ್ತಿಗೆ ಈ ಕುರಿತು ಮಾಹಿತಿ ತರಿಸಿ ಕೊಡುತ್ತೇನೆ. ಆಶ್ರಯ ಸಮಿತಿಗೆ ನಮ್ಮ ಶಾಸಕರುಗಳು ಜಗಳ ಮಾಡಿ ಅಧ್ಯಕ್ಷರುಗಳಾಗಿದ್ದಾರೆ. ಅನೇಕ ಕಡೆಗಳಲ್ಲಿ ಎರಡು ವರ್ಷಗಳಾದರೂ ಫಲಾನುಭವಿಗಳ ಪಟ್ಟಿಯನ್ನು ಅಖೈರುಗೊಳಿಸಿಲ್ಲ. ಎಲ್ಲಿಯೂ ಪ್ರಾರಂಭಿಕ ಕೆಲಸ ಮಾಡಿ ಮೊದಲ ಕಂತನ್ನು ತೆಗೆದುಕೊಂಡಿಲ್ಲ. ಇದರಲ್ಲಿ, ಆ ಪಕ್ಷ, ಈ ಪಕ್ಷ ಎಂದು ಇಲ್ಲ. ಮಲೆನಾಡು, ಮೈದಾನ ಪ್ರದೇಶವೆಂದು ಏನಿಲ್ಲ. ಯಾರೂ ತಮ್ಮನ್ನು ಈ ಕಾರ್ಯಕ್ರಮದಲ್ಲಿ ತೂಡಗಿಸಿಕೊಂಡಿಲ್ಲ. ಆ ಜನರು ನಮಗೆ ಬೇಕಾಗಿಲ್ಲ. ಅವರು ಯಾವಾಗ ಬೇಕೋ ಆವಾಗ ಉಪಯೋಗಿಸಿಕೊಳ್ಳುವುದು ಅಷ್ಟೆ. ಬೇಕಾದರೆ ಮಧ್ಯಾಹ್ನದಲ್ಲಿ ಅದರ ಬಗ್ಗೆ ವಿವರವಾದ ಮಾಹಿತಿಯನ್ನು ತರಿಸುತ್ತೇನೆ. ಮಾನ್ಯ ಬಚ್ಚೇಗೌಡರೇ, kindly advise your Secretary, Housing, ಇಡೀ ರಾಜ್ಯದ್ದು ಎಲ್ಲೆಲ್ಲಿ ನಮ್ಮ

ಶಾಸಕರುಗಳು ವಸತಿ ಸಮಿತಿಗೆ ಅಧ್ಯಕ್ಷರುಗಳಾಗಿದ್ದಾರೆ, ಎಷ್ಟು ಕಡೆ ಫಲಾನುಭವಿಗಳ ಪಟ್ಟಿಯನ್ನು ಅಯಾಯ ವರ್ಷದ್ದು ಫೈನಲೈಸ್ ಮಾಡಿದ್ದಾರೆ, ಎಷ್ಟು ಕಡೆ ಮೊದಲ ಮತ್ತು ಎರಡನೆಯ ಕಂತನ್ನು ತೆಗೆದುಕೊಂಡಿದ್ದಾರೆ, ಎಷ್ಟು ಹಣ ಹೋಗಿ ಬಿ.ಡಿ.ಓ.ಗಳ ಮೂಲಕ ಬ್ಯಾಂಕ್‌ನಲ್ಲಿ ಇದೆ ಎಂಬುದನ್ನು ತಿಳಿದುಕೊಂಡು ಮಾಹಿತಿ ಕೊಡಿ. ಅನೇಕ ಕಡೆ ಲಕ್ಷಾಂತರ ರೂಪಾಯಿಗಳನ್ನು ಬ್ಯಾಂಕ್‌ನಲ್ಲಿ ಇಟ್ಟಿದ್ದಾರೆ. ಅದನ್ನು ಡ್ರಾ ಮಾಡಿಯೇ ಇಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ಎಷ್ಟೆಷ್ಟು ಬಾಕಿ ಇದೆ ಎಂಬ ಬಗ್ಗೆ ವಿವರವಾದ ಮಾಹಿತಿಯನ್ನು ನಾನು ಒದಗಿಸುತ್ತೇನೆ. ಮಾನ್ಯ ಶಂಕರಲಿಂಗೇಗೌಡರು ಆಶ್ರಯ ಮನೆಗೆ ಸಾವಿನ ಮನೆಯೆಂದು ಹೇಳಿದ್ದಾರೆ. ಅದನ್ನು ದಯಮಾಡಿ ಕಡತದಿಂದ ತೆಗೆಯಬೇಕು.

ಶ್ರೀ ಎಸ್. ಶಿವಪ್ಪ : ಆ ಪದವು ಎಕ್ಸ್‌ಪಂಜ್ ಆಗಬೇಕು. ಅದನ್ನು ತೆಗೆಯಬೇಕು. ಅದು ಬಡವರಿಗೆ ಮಾಡಿದ ಅಪಮಾನದಂತೆ ಆಗುತ್ತದೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮೊದಲು ನಾನು ಬೇಜವಾಬ್ದಾರಿಯಿಂದ ಮಾತನಾಡಿದೆ ಎಂದು ತಾವೇನು ಹೇಳಿದ್ದೀರಿ ಆ ಪದವನ್ನು ತೆಗೆದು ಹಾಕಿ. ನಾನು ಎಲ್ಲಿ ಬೇಜವಾಬ್ದಾರಿಯಿಂದ ಮಾತನಾಡಿದ್ದೇನೆ. ವಾಸದ ಮನೆಯೆಂದು ಅಲ್ಲಿ ಚಾವಣಿ ಕುಸಿದು ಸತ್ತಿದ್ದಾರೆ. ಕಳಪೆ ದರ್ಜೆ ಕಾಮಗಾರಿಗಳನ್ನು ಮಾಡಿಸಿ ಆ ರೀತಿ ಆಗಿದೆ. ನಮ್ಮನ್ನು ಏಕೆ ಬೇಜವಾಬ್ದಾರಿಯುತರು ಎಂದು ಹೇಳುತ್ತೀರಿ?

ಅಧ್ಯಕ್ಷರು : ನಾನು ಪ್ರೊಸೀಡಿಂಗ್ಸ್ ಎಲ್ಲವನ್ನೂ ಗಮನಿಸುತ್ತಿದ್ದೇನೆ. ತಾವು ಹಾದಿ ತಪ್ಪಿಸುತ್ತಿದ್ದೀರಿ. You missed the track Mr. Shivappa, you are a cabinet Minister. ಇದು ಸಾವಿನ ಮನೆಯೂ ಆಗುವುದಿಲ್ಲ, ಸ್ವಂತ ಮನೆಯೂ ಆಗುವುದಿಲ್ಲ. ತಾವು ಯಾರೂ ಸರಿಯಾಗಿ ಅರ್ಥ ಮಾಡಿಕೊಳ್ಳುವುದಿಲ್ಲ, ಉತ್ತರವನ್ನೂ ಸರಿಯಾಗಿ ಕೊಡುವುದಿಲ್ಲ. ಇದು ಫಲಾನುಭವಿಗಳು ಸ್ವಂತ ಕಟ್ಟಿಕೊಳ್ಳತಕ್ಕ ಮನೆ. ಇದರಲ್ಲಿ ಗುತ್ತಿಗೆದಾರರ ಪ್ರಶ್ನೆ ಬರುವುದಿಲ್ಲ. ಫಲಾನುಭವಿಗಳು ವಾಸಕ್ಕಾಗಿ ಬೇಕಾದರೂ ಕಟ್ಟಿಕೊಳ್ಳಬಹುದು, ಸಾವಿಗಾಗಿ ಬೇಕಾದರೂ ಕಟ್ಟಿಕೊಳ್ಳಬಹುದು. It does not apply to the Government. Why are you unnecessarily worried about it?

SRI B.N. BACHEGOWDA : The words attributed by him.

ಅಧ್ಯಕ್ಷರು : ತಮಗೆ ಇನ್ನು ಯಾವ ಭಾಷೆಯಲ್ಲಿ ಹೇಳಬೇಕೋ ಗೊತ್ತಿಲ್ಲ. ಆ ಮನೆಗಳನ್ನು ಕಟ್ಟಿಕೊಳ್ಳುವವರು ಸ್ವತಃ ಫಲಾನುಭವಿಗಳು ಆಗಿರುತ್ತಾರೆ. ಆ ಫಲಾನುಭವಿಗಳು ಸಾವಿನ ಮನೆಯನ್ನು ಕಟ್ಟಿಕೊಂಡರೆ ನಾವು ಏನು ಮಾಡಲು ಆಗುತ್ತದೆ?

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : xx ಕಟ್ಟಿರತಕ್ಕ ಮನೆಗಳು.

---

xx ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

MR. SPEAKER : That is wrong. That will not go on record. You should not say any such things here. Uncalled for, don't create problems.

ಡಾ॥ ಎಂ.ಪಿ. ಕರ್ಕಿ : ಮಾನ್ಯ ಅಧ್ಯಕ್ಷರೆ, ತಾವು ಫಲಾನುಭವಿಗಳಿಂದ ಅದನ್ನು ತಿಂಗಳು ತಿಂಗಳಿಗೆ, ವರ್ಷಕ್ಕೆ ಇಷ್ಟು ಎಂದು ವಸೂಲಿ ಮಾಡಬೇಕು ಎಂದು ಹೇಳಿದಿರಿ. ಆ ಮೆಷಿನರಿ ನಮ್ಮ ಹತ್ತಿರ ಇದೆಯೇ ?

ಅಧ್ಯಕ್ಷರು : ಸರ್ಕಾರದ ಮೆಷಿನರಿ ಇಲ್ಲ, ವಾಲೆಂಟರಿ ಏಜನ್ಸಿ ಮೂಲಕ ಅದನ್ನು ಮಾಡಬೇಕು.

ಡಾ॥ ಎಂ.ಪಿ. ಕರ್ಕಿ : ಸುಮ್ಮನೆ ಸರ್ಕಾರ ಏನಾದರೂ ನಿರ್ಧಾರ ಮಾಡಿ ಯಾವುದನ್ನು ಕಾರ್ಯರೂಪಕ್ಕೆ ತರಲು ಆಗುವುದಿಲ್ಲವೋ ಅದನ್ನು ಮಾಡುವುದು ಸರಿಯಲ್ಲ.

ಅಧ್ಯಕ್ಷರು : ಸರ್ಕಾರದ ಮೆಷಿನರಿ ಇಲ್ಲೂ ಇಲ್ಲ, ಕೇರಳ ರಾಜ್ಯದಲ್ಲೂ ಇಲ್ಲ. ಅದಕ್ಕಾಗಿ ನಾನು ಪ್ರಾಯೋಗಿಕವಾಗಿ ದುಂಬಾಲು ಬಿದ್ದು ಎಲ್ಲರ ಕೈಕಾಲು ಹಿಡಿದು ನನ್ನ ಕ್ಷೇತ್ರದಲ್ಲಿ ಮಾಡಿಸುತ್ತಿದ್ದೇನೆ. ತಮಗೆ ಆಶ್ಚರ್ಯ ಆಗಬಹುದು, ಕೂಲಿಯಿಂದ ಜೀವನ ಮಾಡತಕ್ಕಂಥ ಪರಿಶಿಷ್ಟ ಜಾತಿ, ವರ್ಗಕ್ಕೆ ಸೇರಿರತಕ್ಕ ಜನ ನಮಗೆ ಈ ಸಬ್ಸಿಡಿ ಬೇಡ, ನಾವು ಸಾಲವನ್ನು ತೆಗೆದುಕೊಂಡು ಕಟ್ಟುತ್ತೇವೆ, ನಾವು ಕೈಯಿಂದ ಹಣವನ್ನು ಹಾಕುತ್ತೇವೆಂದು ಮುಂದೆ ಬಂದಿದ್ದಾರೆ. ನನ್ನ ಕ್ಷೇತ್ರಕ್ಕೆ ಹತ್ತು ಸಾವಿರ ಮನೆಗಳನ್ನು ಮಂಜೂರು ಮಾಡಿದ್ದೀರಿ ಎಂದು ಬಹಳ ಜನರಲ್ಲಿ ತಪ್ಪು ತಿಳುವಳಿಕೆ ಇದೆ. ನನಗೆ ಹತ್ತು ಸಾವಿರ ಮನೆಗಳನ್ನು ಮಂಜೂರು ಮಾಡಿಲ್ಲ. the Government on a principle ಗ್ಯಾರಂಟಿಯನ್ನು ಮಾತ್ರ ಕೊಟ್ಟಿದ್ದಾರೆ. I have educated my people. ಆ ಪ್ರಯೋಗವನ್ನು ಹೇಗೆ ಮಾಡುತ್ತಿದ್ದೇನೆಂದು ತಾವು ನನ್ನ ಕ್ಷೇತ್ರಕ್ಕೆ ಬಂದರೆ ತೋರಿಸುತ್ತೇನೆ. ನಾವು ಸ್ವಯಂ ಸೇವಾ ಸಂಘಗಳನ್ನು ಇಟ್ಟುಕೊಳ್ಳಬೇಕು, ನಮಗೆ ಅದರಲ್ಲಿ ಅರ್ಪಣಾ ಮನೋಭಾವ ಇರಬೇಕು. ನಮ್ಮನ್ನು ಅದರಲ್ಲಿ ತೊಡಗಿಸಿಕೊಂಡರೆ ಆ ಕೆಲಸವನ್ನು ಮಾಡುವುದು ಸುಲಭ. ಸರ್ಕಾರದ ಮೆಷಿನರಿ ಅವಲಂಬಿಸಲು ಹೋಗಬೇಡಿ.

ಡಾ॥ ಎಂ.ಪಿ. ಕರ್ಕಿ : ನಮಗೂ ಸರ್ಕಾರ ಗ್ಯಾರಂಟಿ ಕೊಟ್ಟರೆ ನಾವೂ ಮಾಡಿಸುತ್ತೇವೆ.

ಅಧ್ಯಕ್ಷರು : ತಾವು ನನ್ನ ಕ್ಷೇತ್ರಕ್ಕೆ ಬನ್ನಿ ನಾನು ಇದರ ಬಗ್ಗೆ ತಮಗೆ ವಿವರಣೆ ನೀಡುತ್ತೇನೆ. You come I will explain to you. All of you can ask for it. There is nothing wrong.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ತಮಗೆ ಹತ್ತು ಸಾವಿರ ಮನೆಗಳನ್ನು ಕೊಟ್ಟಿರುವುದು ನಿಜಕ್ಕೂ ಒಂದು ಸಾಧನೆ. ಸರ್ಕಾರ ಈ ದಿಕ್ಕಿನಲ್ಲಿ ಪ್ರಯತ್ನ ಮಾಡಿದ್ದಕ್ಕೆ ನಾನೂ ಸಹ ಸರ್ಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ರಾಜ್ಯದಲ್ಲಿ ಬಡವರಿಗೆ ಹತ್ತು ಸಾವಿರ ಮನೆಗಳು ಸಿಗುತ್ತದೆ ಎಂದು ತುಂಬಾ ಸಂತೋಷ ಪಡುತ್ತೇವೆ. ಆದರೆ ಆ ಸರ್ಕ್ಯುಲರ್‌ನಲ್ಲಿ ಕೆಲವು ಅಂಶಗಳನ್ನು ನಮೂದು ಮಾಡಿದ್ದಾರೆ. ಈ ಹತ್ತು ಸಾವಿರ ಮನೆಗಳು ಮುಗಿಯುವವರೆಗೆ ಇಡೀ ರಾಜ್ಯದಲ್ಲಿ ಇದರ ಬಗ್ಗೆ ಮತ್ತಾವುದೇ ಪ್ರಸ್ತಾವನೆಯನ್ನು ತರಲೇಬಾರದು ಎಂದು ಹೇಳಿದ್ದಾರೆ. ಶ್ರೀನಿವಾಸಪುರದಲ್ಲಿ ಮಾತ್ರ ಬಡವರು ಇದ್ದಾರಾ ಸಾರ್ ? ಇಡೀ ರಾಜ್ಯದಲ್ಲೂ ಬಡವರು ಇದ್ದಾರೆ.

ಅಧ್ಯಕ್ಷರು : ಒಂದೂವರೆ ವರ್ಷದ ಸತತ ಪ್ರಯತ್ನ ಮಾಡಿ ಅದಕ್ಕೆ ಬೇಕಾಗಿರುವ ರೂಪುರೇಷೆಗಳನ್ನು ಸಿದ್ಧಪಡಿಸಿದ ಮೇಲೆ ಸರ್ಕಾರದ ಮೇಲೆ ಬಹಳ ಒತ್ತಡವನ್ನು ಹಾಕಿ, ಅವರಿಗೆ ಮನವರಿಕೆ ಆದಮೇಲೆ ಅವರು ತಾತ್ವಿಕವಾಗಿ ಒಪ್ಪಿಗೆ ಕೊಟ್ಟಿದ್ದಾರೆ. ಬೇರೆ ಯಾರಾದರೂ ಇದೇ ರೀತಿ ಮಾಡುವುದಾಗಿ ಮುಂದೆ ಬಂದರೆ ನಾವು ಒತ್ತಡವನ್ನು ತರಬಹುದು, ಇನ್ನೂ ಕೆಲವು ಕಡೆ ಇದನ್ನು ವಿಸ್ತರಿಸಬಹುದು.

ಶ್ರೀ ಕೆ.ಎಸ್. ಈಶ್ವರಪ್ಪ : ಎಲ್ಲಾ ಶಾಸಕರುಗಳು ಯಾವ ರೀತಿಯಲ್ಲಿ ಕೆಲಸ ಮಾಡಬೇಕು ಎಂಬ ಬಗ್ಗೆ ಒಂದು ಮಾದರಿಯನ್ನು ತಾವು ಹಾಕಿ ಕೊಟ್ಟಿದ್ದೀರಿ. ಅದಕ್ಕೆ ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಯಾವುದೇ ಕೆಲಸದ ಬಗ್ಗೆ ಸರ್ಕಾರದ ಬೆನ್ನು ಹತ್ತಿದರೆ ಕೆಲಸ ಆಗುತ್ತದೆ ಎಂಬುದಕ್ಕೆ ತಮ್ಮ ಪ್ರಯತ್ನವೇ ಸಾಕ್ಷಿ. ಈ ವಿಚಾರದಲ್ಲಿ ನಿಜವಾಗಿಯೂ ತಮ್ಮನ್ನು ಅನುಸರಿಸುತ್ತೇನೆ. ಆದರೆ ಇವರು ಆರ್ಡರನ್ನು ಇಷ್ಯೂ ಮಾಡುವ ಸಂದರ್ಭದಲ್ಲಿ ಶ್ರೀನಿವಾಸಪುರ ವಿಧಾನಸಭಾ ಕ್ಷೇತ್ರಕ್ಕೆ ಹತ್ತು ಸಾವಿರ ಮನೆಗಳು ಎಂಬ ಬಗ್ಗೆ ಇರುವ ಕ್ಲಾಜನ್ನು ತೆಗೆಯಬೇಕು. ಇಲ್ಲದಿದ್ದರೆ ನಾವು ಪ್ರಯತ್ನ ಮಾಡಲು ಆಗುವುದೇ ಇಲ್ಲ.

ಅಧ್ಯಕ್ಷರು : ಅದರ ಬಗ್ಗೆ ಇನ್ನೊಂದು ಸಲ ತೆಗೆದುಕೊಳ್ಳೋಣ. ಈ ಪ್ರಶ್ನೆಯಲ್ಲಿ ತಾವು ಹೇಳುವುದು ಸಂಬಂಧಪಡುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಹತ್ತು ಸಾವಿರ ಮನೆಗಳ ಬಗ್ಗೆ ಆ ಪ್ರಶ್ನೆ ಬಂದಾಗ ಹೇಳಿದಿರಿ. ಆ ಹತ್ತು ಸಾವಿರ ಮನೆಗಳ ಬಗ್ಗೆ ಪ್ರಶ್ನೆ ಕೇಳಿದರೆ ಹೀಗೆ ಅಂದರೆ ಹೇಗೆ?

ಅಧ್ಯಕ್ಷರು : ತಾವು ಬೇರೆ ರೂಪದಲ್ಲಿ ಇಂದು ಮಧ್ಯಾಹ್ನವೇ ಪ್ರಸ್ತಾಪ ಮಾಡಿ, we will ask the Government to do it.

ಶ್ರೀ ಬಿ.ಎನ್. ಬಚ್ಚೇಗೌಡ : ಇದರಲ್ಲಿರುವ ನಿಯಮಗಳನ್ನು ಸಡಿಲಗೊಳಿಸುವ ಪ್ರಸ್ತಾವನೆ ಈಗಾಗಲೇ ಮಾಡಲಾಗಿದೆ.

ಶ್ರೀ ಕೆ. ಜಯರಾಮ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ ಹಳೆಯದಾದ ಹೆಂಚು, ಕಲ್ಲನ್ನು ಹಾಕಿ ಕಟ್ಟಿರುವ ಮನೆಗಳನ್ನು ಇಂಜಿನಿಯರ್‌ಗಳು ರಿಜೆಕ್ಟ್ ಮಾಡುತ್ತಿದ್ದಾರೆ. ತೆಂಗಿನ ಮರದ ಪಕ್ಕದಲ್ಲಿ ನಿವೇಶನ ಇದ್ದರೂ ರಿಜೆಕ್ಟ್ ಮಾಡುತ್ತಿದ್ದಾರೆ. ಫಲಾನುಭವಿಗಳ ಹತ್ತಿರ ಹಣ ಇರುವುದಿಲ್ಲ. ಹಳೆಯ ಮತ್ತು ಒಡೆದುಹೋದ ಮನೆಯ ಹಂಚನ್ನು ಹಾಕಿಕೊಂಡು ಮನೆ ಕಟ್ಟುತ್ತಿದ್ದಾರೆ. ಅಂಥ ಮನೆಗಳಿಗೆ ಹಣವನ್ನು ಕೊಡುವುದಿಲ್ಲ. ಇದರ ಬಗ್ಗೆ ಜಿಲ್ಲಾಪಂಚಾಯಿತಿಯಲ್ಲಿ ಸಭೆ ಮಾಡಿ ಸರ್ಕಾರಕ್ಕೆ ತಿಳಿಸಿದ್ದೇವೆ, ಆದರೆ ಇವರು ಒಪ್ಪಿಕೊಂಡಿಲ್ಲ. ಅಂಥ ಮನೆಗಳಿಗೆ ಹಣವನ್ನು ಕೊಡಬೇಕು ಎಂದು ಒತ್ತಾಯ ಮಾಡುತ್ತಿದ್ದೇನೆ.

ಅಧ್ಯಕ್ಷರು : ತಾವು ಇದರ ಬಗ್ಗೆ ದೂರನ್ನು ಕೊಡಿ.